

# ಶ್ರೀರಾಮಕೃಷ್ಣ ಮಹಿಮಾ

ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್

## ಜೈ ಗುರುದೇವ

## ಅಧ್ಯಾಯ ೩ — ದೈವಶಕ್ತಿಯ ಆವಿರ್ಭಾವ

ಜಯ ರಾಮಕೃಷ್ಣ ವಾಂಛಿತ ಕಲ್ಪತರುವೆ ।
ಜಯ ದೀನಬಂಧು ಭಗವಾನ್ ಜಗದ್ಗುರುವೆ ॥

ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೇ ।
ನಯ ಭಯದಿ ಪಾದಧೂಳಿಯ ಬೇಡುತಿರುವೆ ॥

೩೦೭. ನಾನಿನ್ನ ಸಿಂಗರಿಸಿ ಕಳುಹಿರ್ದೆ ಕಂದ ।
ನೀನೇಕೆ ಬದಲಾದೆ ಈ ರೀತಿಯಿಂದ ॥

೩೦೮. ಬಾರೆಂದು ತೊಡೆಯಲ್ಲಿ ಕುಳ್ಳಿರಿಸಿಕೊಂಡು ।
ಬಾರಿಬಾರಿಗು ಯೋಚಿಸುವಳು ಮನನೊಂದು ॥

೩೦೯. ಮಗನ ಸನ್ಯಾಸಿಯುಡುಗೆಯಲಿ ಕಂಡಾಗ ।
ಕಣ್ಣೀರ ಧಾರೆಯಿಳಿಯಿತು ಮುಖದೊಳಾಗ ॥

೩೧೦. ಹೃದಯಕಂಕುಶದಿಂದ ತಿವಿದ ತೆರನಾಗೆ ।
ಎವೆಯಿಕ್ಕದೆ ಮಗನ ಮೋರೆಯನು ನೋಡಿ ॥

೩೧೧. ಹಲವ ಹಂಬಲಿಸುತ್ತ ಮರುಗುತಿರಲಾಕೆ ।
ಗೆಳೆಯರೈತಂದರೈ ಆಟವಾಡಲಿಕೆ ॥

೩೧೨. ಕೂಡಲೇ ತಾಯ ತೊಡೆಯಿಂದಿಳಿದು ಪೊರಟ ।
ಖುಷಿಯಿಂದ ಹುಡುಗರೊಡನಾಟದೊಳು ಬೆರೆತ ॥

೩೧೩. ಅವರಾಟ ನೋಡಿ ಮರೆತಳು ಮಾತೆ ಮರುಕ ।
ಮರುಳುಗೊಳಿಸುವ ಲೀಲೆಗೈವ ಭಗವಂತ ॥

೩೧೪. ಹುಡುಗಾಟಿಕೆಯಲಿ ತಿಂಡಿಯ ಗೀಳು ಸಹಜ ।
ಅದನರಿತು ವರ್ತಿಪುದು ಹಳ್ಳಿಯ ಸಮಾಜ ॥

೩೧೫. ಬಿದಿರ ಬುಟ್ಟಿಯಲಿ ಮಂಡಕ್ಕಿ ಬೆಲ್ಲವನು ।
ಹದವರಿತು ಇರಿಸುವಳು ನಮ್ಮಜ್ಜಿಯದನು ॥

೩೧೬. ಆ ಗದಾಧರನು ಕೈಯೊಳು ಬುಟ್ಟಿ ಹಿಡಿದು ।
ಆಗಾಗ ತಿನುತಿರ್ದ ಹವ್ಯಾಸಕೊಲಿದು ॥

೩೧೭. ಬಗೆಬಗೆಯ ತಿಂಡಿಯಾ ತೀಟೆ ಬಾಲರಿಗೆ ।
ಹಗಲಿರುಳು ಎನದೆ ಹಟಗೈವರೈ ಹೀಗೆ ॥

೩೧೮. ಚಾಪಲ್ಯದಿಂ ಮರೆತು ಆ ಗದಾಧರನು ।
ತಿಂಡಿ ತಿನುವಾಗಲು ತಟಸ್ಥನಾಗುವನು ॥

೩೧೯. ಮಂಡಕ್ಕಿ ಬೆಲ್ಲದಾ ಬುಟ್ಟಿ ಕೈಯೊಳಗೆ ।
ಅವನೊಳಗಿನಾ ಅರಿವು ತಾದಾತ್ಮ್ಯದೊಳಗೆ ॥

೩೨೦. ಆ ಸಮಯದೊಳಗಾತ ಮೈಮರೆಯುತಿದ್ದ ।
ಭಾವದಾವೇಶಕೆ ಅವನೊಳಗಾಗುತಿರ್ದ ॥

೩೨೧. ಎವೆಗಳಲ್ಲಾಡವೈ ತನುವಲುಗದಿಹುದು ।
ಮಾತಿಲ್ಲ ಕತೆಯಿಲ್ಲ ಮನವು ನಿಶ್ಚಲವು ॥

೩೨೨. ಆ ಸ್ಥಿತಿಯೊಳಿರುವಾಗಲವನನ್ನು ನೋಡಿ ।
ಭೂತ ಬಡಿಯಿತು ಎಂದು ತಿಳಿದು ನಮ್ಮಜ್ಜಿ ॥

೩೨೩. ದುರ್ಗೆಯಾ ನಾಮಜಪ ಮಾಡತೊಡಗುವಳು ।
ಕಂಗಾಣದಾಗಿ ಕಾತರಿಸಿ ರೋದಿಪಳು ॥

೩೨೪. ಸಮಯ ಕಳೆದಂತೆ ಸರಿಯಪ್ಪನು ಗದಾಯಿ ।
ಸಮನಾಗಿ ತೊಡಗುವನು ಬಾಲಕೇಳಿಯಲಿ ॥

೩೨೫. ಬಾಹ್ಯಸ್ಥಿತಿಯನು ನೋಡೆ ಭಯವಾಗುತಿತ್ತು ।
ಅಂತರಂಗದ ಬಗೆಯದಾರಿಗೈ ಗೊತ್ತು ॥

೩೨೬. ಹೊಲದಿ ತಿರುಗಾಡುವಾಗೊಮ್ಮೆ ಹೀಗಾಗಿ ।
ಕೆಳಗುರುಳಿ ಬಿದ್ದಿರ್ದ ಸ್ಮೃತಿಯಿಲ್ಲವಾಗಿ ॥

೩೨೭. ವಿವರಣೆಗೆ ಸಿಗದಿಹ ಪವಾಡವಾತನದು ।
ಅವತಾರ ಪುರುಷನಿಗೆ ಮಾತ್ರ ತಿಳಿವುದದು ॥

ಕನ್ನಡ ಕಾವ್ಯಾನುವಾದ: ಮಂಜುನಾಥ ಭಾಗವತ ಹೊಸ್ತೋಟ, ಸಹಾಯ : ಕೃಷ್ಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ, ಭೈರುಂಬೆ